ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೦ Volume - 160	ಬೆಂಗಳೂರು, ಶುಕ್ರವಾರ ೧೨, ಡಿಸೆಂಬರ್, ೨೦೨೫ (ಮಾರ್ಗಶಿರ, ೨೧, ಶಕವರ್ಷ, ೧೯೪೭) BENGALURU, FRIDAY 12, DECEMBER, 2025 (MARGASHIRA, 21, SHAKAVARSHA, 1947)	ಸಂಚಿಕೆ ೨೩೮ Issue 238

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಸಾದರಮಂಗಲ ಗ್ರಾಮದ ಸ.ನಂ.68, 69, 70, 77 ಹಾಗೂ ಹೂಡಿ ಗ್ರಾಮದ ಸ.ನಂ.121, 127, 128, 129 ಗಳಲ್ಲಿ ಹಿಂದಿನ ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆ 1995 (RCDP-1995) ರಲ್ಲಿನ ಪ್ರಸ್ತಾಪಿತ 80′ ಅಡಿ & 40′ ಅಡಿ ಅಗಲದ ರಸ್ತೆಗಳನ್ನು ಪರಿಷ್ಕೃತ ಮಹಾಯೋಜನೆ-2015 ರಲ್ಲಿ Karnataka General Clauses Act 1899 ರ ಕಲಂ 21 ರ ಅಡಿಯಲ್ಲಿ ಅಳವಡಿಸುವ ಕುರಿತು.

ಓದಲಾಗಿದೆ: 1) ಸರ್ಕಾರದ ಪತ್ರ ಸಂಖ್ಯೆ: ನಅಇ 94 ಬೆಂಆಸೇ 2024(ಇ), ದಿನಾಂಕ:15.02.2025.

2) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರ ಪತ್ರ ಸಂಖ್ಯೆ: ಬೆಂಅಪ್ರಾ/ನಯೋಸ/ CCF-01/16-17 & GVT-428 & 587/272/2025-25, ದಿನಾಂಕ:23.10.2025.

******

ಮೇಲೆ ಓದಲಾದ ಕ್ರಮಸಂಖ್ಯೆ (1)ರ ಸರ್ಕಾರದ ಪತ್ರದಲ್ಲಿ, ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 34877/2015ರಲ್ಲಿ ದಿನಾಂಕ: 07.09.2022ರಂದು ನೀಡಿರುವ ತೀರ್ಪು ಮತ್ತು ರಿಟ್ ಅಪೀಲ್ ಸಂಖ್ಯೆ: 502/2023 ರಲ್ಲಿ ದಿನಾಂಕ: 10.01.2024ರಂದು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ, ದಿನಾಂಕ: 25.01.2024ರಂದು ನಡೆದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ: 37/2024ರಲ್ಲಿ ಕೈಗೊಂಡ ನಿರ್ಣಯದನ್ವಯ, The Karnataka General Clauses Act 1899 ರ ಕಲಂ 21 ರಡಿ ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಸಾದರಮಂಗಲ ಗ್ರಾಮದ ಸ.ನಂ. 68, 69, 70, 77 ಹಾಗೂ ಹೂಡಿ ಗ್ರಾಮದ ಸ.ನಂ. 121, 127, 128, 129 ರ ಜಮೀನುಗಳಲ್ಲಿ ಹಿಂದಿನ RCDP-1995 ರಲ್ಲಿನ ಪ್ರಸ್ತಾಪಿತ 80 ಅಡಿ ಮತ್ತು 40 ಅಡಿ ಅಗಲದ ರಸ್ತೆಗಳನ್ನು ಪರಿಷ್ಕೃತ ಮಹಾಯೋಜನೆ RMP-2015 ರಲ್ಲಿ ಅಳವಡಿಸಿಕೊಳ್ಳಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(1) ರಡಿ ಸರ್ಕಾರದ ತಾತ್ಕಾಲಿಕ ಅನುಮೋದನೆ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮಸಂಖ್ಯೆ (2)ರ ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರ ಪತ್ರದಲ್ಲಿ ಸರ್ಕಾರದ ದಿನಾಂಕ: 15.02.2025ರ ಪತ್ರದನ್ವಯ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13 (1) ರ ಅಡಿಯಲ್ಲಿ ಸರ್ಕಾರದ ತಾತ್ಕಾಲಿಕ ಅನುಮೋದನೆ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ನೀಡಲಾಗಿರುವ ಕುರಿತು 60 ದಿನಗಳ ಅವಧಿಗೆ ಸಾರ್ವಜನಿಕ ಸಲಹೆಗಳನ್ನು ಆಹ್ವಾನಿಸಿ, ದಿನಾಂಕ: 02.04.2025 ರಂದು ಪ್ರಾಧಿಕಾರದಿಂದ ಪತ್ರಿಕಾ ಪ್ರಕಟಣೆ ನೀಡಲಾಗಿದ್ದು, ನಿಗದಿತ ಅವಧಿಯಲ್ಲಿ ಯಾವುದೇ ಸಲಹೆಗಳು ಪ್ರಾಧಿಕಾರದಲ್ಲಿ ಸ್ವೀಕೃತಗೊಂಡಿರುವುದಿಲ್ಲವೆಂದು ತಿಳಿಸಿ, ಈ ಕುರಿತು ದಿನಾಂಕ 09.09.2025 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ: 136/2025 ರಲ್ಲಿ ಕೈಗೊಂಡ ನಿರ್ಣಯದನ್ವಯ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಸಾದರಮಂಗಲ ಗ್ರಾಮದ ಸ.ನಂ.68, 69, 70, 77 ಹಾಗೂ ಹೂಡಿ ಗ್ರಾಮದ ಸ.ನಂ.121, 127, 128, 129 ಗಳಲ್ಲಿ ಹಿಂದಿನ ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆ 1995 (RCDP-1995) ರಲ್ಲಿನ ಪ್ರಸ್ತಾಪಿತ 80' ಅಡಿ & 40' ಅಡಿ ಅಗಲದ ರಸ್ತೆಗಳನ್ನು ಈಗಿನ ಪರಿಷ್ಕೃತ ಮಹಾಯೋಜನೆ-2015 ರಲ್ಲಿ ಅಳವಡಿಸಿಕೊಳ್ಳಲು Karnataka General Clauses Act 1899 ರ ಕಲಂ (21) ರ ಅಡಿಯಲ್ಲಿ ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13 (2) ರ ಅಡಿಯಲ್ಲಿ ಅಂತಿಮ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 94 ಬೆಂಅಸೇ 2024(ಇ), ಬೆಂಗಳೂರು,

ದಿನಾಂಕ: 09.12.2025.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, The Karnataka General Clauses Act 1899 ರ ಕಲಂ 21 ರಡಿಯಲ್ಲಿನ ಅವಕಾಶದನ್ವಯ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರ ಹೋಬಳಿ, ಸಾದರಮಂಗಲ ಗ್ರಾಮದ ಸ.ನಂ. 68, 69, 70, 77 ಹಾಗೂ ಹೂಡಿ ಗ್ರಾಮದ ಸ.ನಂ. 121, 127, 128, 129 ರ ಜಮೀನುಗಳಲ್ಲಿ ಹಿಂದಿನ RCDP-1995 ರಲ್ಲಿನ ಪ್ರಸ್ತಾಪಿತ 80 ಅಡಿ ಮತ್ತು 40 ಅಡಿ ಅಗಲದ ರಸ್ತೆಗಳನ್ನು ಪರಿಷ್ಕೃತ ಮಹಾಯೋಜನೆ RMP-2015 ರಲ್ಲಿ ಅಳವಡಿಸಿಕೊಳ್ಳಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(3) ರಡಿಯಲ್ಲಿ ಸರ್ಕಾರದ ಅಂತಿಮ ಅನುಮೋದನೆ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಾಜೇಶ್ ಎಸ್ ಸೂಳಿಕೇರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
(ಬಿಡಿಎ & ಬೆಂ-1)

PR-298

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH